## 2011ರ ಕರ್ನಾಟಕ ಅಧಿನಿಯಮ ಸಂಖ್ಯೆ 36

## ಕರ್ನಾಟಕ (ಪ್ರಾದೇಶಿಕ ಕಾನೂನುಗಳ) ನಿರಸನಗೊಳಿಸುವ ಅಧಿನಿಯಮ, 2011

### ಪ್ರಕರಣಗಳ ಪಟ್ಟಿ


ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**ಪ್ರಕರಣಗಳು:**

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಕೆಲವು ಕಾನೂನುಗಳು ನಿರಸನ
4. ಉಳಿಸುವಿಕೆಗಳು

ಅನುಸೂಚಿ


### ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**2011ರ ಅಧಿನಿಯಮ ಸಂಖ್ಯೆ 36.–** ರಾಜ್ಯದ ವಿವಿಧ ಪ್ರದೇಶಗಳಲ್ಲಿ ಎಂದರೆ ಬೆಳಗಾಂ ಪ್ರದೇಶ, ಕೊಡಗು ಜಿಲ್ಲೆ, ಗುಲ್ಬರ್ಗ ಪ್ರದೇಶ, ಮಂಗಳೂರು ಮತ್ತು ಕೊಳ್ಳೇಗಾಲ ಪ್ರದೇಶ ಹಾಗೂ ಮೈಸೂರು ಪ್ರದೇಶ ಇಲ್ಲಿ ಜಾರಿಯಲ್ಲಿರುವ ಎಲ್ಲಾ ಸಂಪೂರ್ಣ ಪ್ರಾದೇಶಿಕ ಅಧಿನಿಯಮಗಳನ್ನು ನಿರಸನಗೊಳಿಸುವುದಕ್ಕೆ ಸಲಹೆ ನೀಡಲು ಮತ್ತು ಅವಶ್ಯವೆಂದು ಪರಿಗಣಿಸಲಾದ ಅಂಥ ಅಧಿನಿಯಮಗಳನ್ನು ಸಂಪುಟಗಳನ್ನು ತಯಾರಿಸಲು ನಿವೃತ್ತ ಕಾನೂನು ಕಾರ್ಯದರ್ಶಿಗಳು ಮತ್ತು ಕರ್ನಾಟಕ ಆಡಳಿತ ನ್ಯಾಯಾಧಿಕರಣದ ನಿವೃತ್ತ ಉಪಾಧ್ಯಕ್ಷರಾದ ಶ್ರೀ ಕೆ.ಆರ್.ಚಾಮಯ್ಯ ಇವರ ನೇತೃತ್ವದಲ್ಲಿ ಒಂದು ಏಕಸದಸ್ಯ ಆಯೋಗವನ್ನು ಸರ್ಕಾರವು ರಚಿಸಿದೆ.

ಎರಡನೇ ಹಂತದಲ್ಲಿ ಸಮಿತಿಯು ಬೆಳಗಾಂ ಪ್ರದೇಶ ಪ್ರಾದೇಶಿಕ ಕಾನೂನುಗಳ 40 ಅಧಿನಿಯಮಗಳನ್ನು, ಕೊಡಗು ಜಿಲ್ಲೆ ಪ್ರದೇಶ ಪ್ರಾದೇಶಿಕ ಕಾನೂನುಗಳ 01 ಅಧಿನಿಯಮವನ್ನು, ಗುಲ್ಬರ್ಗಾ ಪ್ರದೇಶ ಪ್ರಾದೇಶಿಕ ಕಾನೂನುಗಳ 05 ಅಧಿನಿಯಮಗಳನ್ನು, ಮಂಗಳೂರು ಮತ್ತು ಕೊಳ್ಳೇಗಾಲ ಪ್ರದೇಶದ 36 ಅಧಿನಿಯಮಗಳನ್ನು ಮತ್ತು ಹಳೆಯ ಮೈಸೂರು ಪ್ರದೇಶದ 05 ಅಧಿನಿಯಮಗಳನ್ನು ನಿರಸನಗೊಳಿಸುವುದಕ್ಕೆ ಶಿಫಾರಸ್ಸು ಮಾಡಿದೆ. ಸರ್ಕಾರವು ಈ ಶಿಫಾರಸ್ಸುಗಳನ್ನು ಒಪ್ಪಿರುತ್ತದೆ.

ಆದ್ದರಿಂದ ಈ ವಿಧೇಯಕ.

(2011ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ:6, ಕಡತ ಸಂಖ್ಯೆ:ಸಂವ್ಯಶಾಇ 8 ಶಾಸನ 2010)

---

**2011ರ ಕರ್ನಾಟಕ ಅಧಿನಿಯಮ ಸಂಖ್ಯೆ 36**

(2011ರ ಜುಲೈ ಹದಿನಾರನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ (ಪ್ರಾದೇಶಿಕ ಕಾನೂನುಗಳ) ನಿರಸನಗೊಳಿಸುವ ಅಧಿನಿಯಮ, 2011**

(2011ರ ಜುಲೈ ಹದಿನಾಲ್ಕನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)

ರಾಜ್ಯದಲ್ಲಿ ಜಾರಿಯಲ್ಲಿರುವ ಕೆಲವು ಪ್ರಾದೇಶಿಕ ಕಾನೂನುಗಳ ಅಧಿನಿಯಮಗಳನ್ನು ನಿರಸನಗೊಳಿಸಲು ಮತ್ತು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ರಾಜ್ಯದ ಒಂದು ಅಥವಾ ಇತರ ಪ್ರದೇಶಗಳಲ್ಲಿ ಜಾರಿಯಲ್ಲಿರುವ ಕೆಲವು ಪ್ರಾದೇಶಿಕ ಕಾನೂನುಗಳನ್ನು ನಿರಸನಗೊಳಿಸುವುದು ಮತ್ತು ರಾಜ್ಯದಲ್ಲಿ ಜಾರಿಯಲ್ಲಿರುವ ಅಂಥ ಕೆಲವು ಮತ್ತು ಇತರ ಕಾನೂನುಗಳನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ.-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) **ಈ ಅಧಿನಿಯಮವನ್ನು ಕರ್ನಾಟಕ (ಪ್ರಾದೇಶಿಕ ಕಾನೂನುಗಳ) ನಿರಸನಗೊಳಿಸುವ ಅಧಿನಿಯಮ, 2011** ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯ ಪಡಿಸಿದ ಹೊರತು,-

(ಎ) **"ಪ್ರಾದೇಶಿಕ ಕಾನೂನುಗಳು"** ಎಂದರೆ 1956ರ ನವೆಂಬರ್ 1 ರ ನಿಕಟ ಪೂರ್ವದಲ್ಲಿ ಹಿಂದಿನ ರಾಜ್ಯಗಳಾದ ಬಾಂಬೆ, ಕೊಡಗು, ಹೈದರಾಬಾದ್, ಮದ್ರಾಸು ಮತ್ತು ಮೈಸೂರು ರಾಜ್ಯಗಳಲ್ಲಿ ಜಾರಿಯಲ್ಲಿರುವ ಮತ್ತು ರಾಜ್ಯಗಳ ಪುನರ್ ವಿಂಗಡನೆ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 37) 119ನೇ ಪ್ರಕರಣದ ಅಡಿಯಲ್ಲಿ ಜಾರಿಯಲ್ಲಿರುವುದು ಮುಂದುವರೆದಿರುವ, ಈಗ ಕರ್ನಾಟಕ ರಾಜ್ಯದ ಭಾಗವಾಗಿರುವ ಆ ರಾಜ್ಯಗಳ ಅನುಕ್ರಮ ಪ್ರದೇಶಗಳಲ್ಲಿ ಜಾರಿಯಲ್ಲಿದ್ದ ಕಾನೂನುಗಳು.

(ಬಿ) **"ಅನುಸೂಚಿ"** ಎಂದರೆ, ಈ ಅಧಿನಿಯಮಕ್ಕೆ ಲಗತ್ತಾದ ಒಂದು ಅನುಸೂಚಿ.

**3. ಕೆಲವು ಕಾನೂನುಗಳು ನಿರಸನ.**- ರಾಜ್ಯದ ಅನುಕ್ರಮವಾದ ಪ್ರದೇಶಗಳಲ್ಲಿ ಜಾರಿಯಲ್ಲಿದ್ದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಪ್ರಾದೇಶಿಕ ಕಾನೂನುಗಳನ್ನು ನಿರಸನ ಮಾಡಲಾಗಿದೆ.

4. **ಉಳಿಸುವಿಕೆಗಳು.**- (1) ಈ ಅಧಿನಿಯಮದ ಮೂಲಕ ಮಾಡಲಾದ ಯಾವುದೇ ಪ್ರಾದೇಶಿಕ ಕಾನೂನಿನ ನಿರಸನವು ಯಾವ ಇತರ ಕಾನೂನುಗಳಿಗೆ ನಿರಸಿತ ಕಾನೂನನ್ನು ಅನ್ವಯಿಸಲಾಗಿದೆಯೋ, ಅಳವಡಿಸಲಾಗಿದೆಯೋ ಅಥವಾ ಉಲ್ಲೇಖಿಸಲಾಗಿದೆಯೋ, ಆ ಇತರ ಯಾವುದೇ ಕಾನೂನುಗಳಿಗೆ ಬಾಧಕವಾಗತಕ್ಕದ್ದಲ್ಲ ;

ಮತ್ತು ಈ ಅಧಿನಿಯಮವು, ಈಗಾಗಲೇ ಮಾಡಿದ ಅಥವಾ ಮಾಡಲು ಎಡೆಮಾಡಿಕೊಟ್ಟ ಯಾವುದೇ ಕಾರ್ಯದ, ಅಥವಾ ಈಗಾಗಲೇ ಆರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಿದ ಯಾವುದೇ ಯಾವುದೇ ಹಕ್ಕು, ಸ್ವಾಮ್ಯ, ಹೊಣೆ ಅಥವಾ ದಾಯಿತ್ವದ, ಅಥವಾ ಅದರ ಸಂಬಂಧದಲ್ಲಿ ಯಾವುದೇ ಪರಿಹಾರ ಅಥವಾ ವ್ಯವಹರಣೆಯ, ಅಥವಾ ಯಾವುದೇ ಋಣ, ದಂಡನೆ, ಹೊಣೆ, ದಾಯಿತ್ವ, ಕ್ಲೇಮು ಅಥವಾ ಕೋರಿಕೆಯ ಅಥವಾ ಅದರಿಂದ ಯಾವುದೇ ಬಿಡುಗಡೆ ಅಥವಾ ವಿಮೋಚನೆಯ ಅಥವಾ ಈಗಾಗಲೇ ನೀಡಿರುವ ನಷ್ಟಭರ್ತಿಯ, ಅಥವಾ ಯಾವುದೇ ಹಿಂದಿನ ಕೃತ್ಯ ಅಥವಾ ಕಾರ್ಯದ ರುಜುವಾತಿನ ಮಾನ್ಯತೆ, ಅಮಾನ್ಯತೆ, ಪ್ರಭಾವ ಅಥವಾ ತತ್ಪರಿಣಾಮಗಳಿಗೆ ಬಾಧಕವಾಗತಕ್ಕದ್ದಲ್ಲ ;

ಹಾಗೂ ಈ ಅಧಿನಿಯಮವು ಕಾನೂನಿನ ಯಾವುದೇ ಸೂತ್ರವನ್ನು ಅಥವಾ ನಿಯಮವನ್ನು, ಅಥವಾ ಸುಸ್ಥಾಪಿತವಾದ ಅಧಿಕಾರ ವ್ಯಾಪ್ತಿಯನ್ನು, ವಾದದ, ರೂಢಿಯ ಅಥವಾ ಕಾರ್ಯವಿಧಾನದ ಸ್ವರೂಪ ಅಥವಾ ಕ್ರಮವನ್ನು, ಅಥವಾ ಈಗ ಇರುವ ಪದ್ಧತಿ, ಆಚರಣೆ, ವಿಶೇಷಾಧಿಕಾರ, ನಿರ್ಬಂಧ ವಿನಾಯಿತಿ, ಹುದ್ದೆ ಅಥವಾ ನೇಮಕವನ್ನು ಈ ಮೂಲಕ ನಿರಸಿತವಾದ ಯಾವುದೇ ಕಾನೂನಿನ ಮೂಲಕ, ಅದರಲ್ಲಿ ಅಥವಾ ಇದರಿಂದ ಯಾವುದೇ ರೀತಿಯಲ್ಲಿ ಇವುಗಳನ್ನು ಅನುಕ್ರಮವಾಗಿ ಸ್ಥಿರೀಕರಿಸಿರಬಹುದಾಗಿದ್ದರೂ ಅಥವಾ ಮಾನ್ಯ ಮಾಡಿರಬಹುದಾಗಿದ್ದರೂ ಅಥವಾ ಪಡೆದಿರಬಹುದಾಗಿದ್ದರೂ ಸಹ ಬಾಧಿಸತಕ್ಕದ್ದಲ್ಲ.

ಹಾಗೂ ಈ ಅಧಿನಿಯಮದ ಮೂಲಕ ಮಾಡಲಾದ ಯಾವುದೇ ಅಧಿನಿಯಮದ ನಿರಸನವು, ಈಗ ಅಸ್ತಿತ್ವದಲ್ಲಿಲ್ಲದ ಅಥವಾ ಜಾರಿಯಲ್ಲಿಲ್ಲದ ಯಾವುದೇ ಹುದ್ದೆ, ರೂಢಿ, ದಾಯಿತ್ವ, ಹಕ್ಕು, ಸ್ವಾಮ್ಯ, ವಿಶೇಷಾಧಿಕಾರ, ನಿರ್ಬಂಧ, ವಿನಾಯಿತಿ, ಆಚರಣೆ, ಪದ್ಧತಿ, ಕಾರ್ಯವಿಧಾನ, ವಿಲೀನ ಅಥವಾ ಇತರ ವಿಷಯವನ್ನು ಅಥವಾ ಕಾರ್ಯವನ್ನು ಪುನಃ ಜಾರಿಗೊಳಿಸತಕ್ಕದ್ದಲ್ಲ ಅಥವಾ ಪೂರ್ವ ಸ್ಥಿತಿಗೆ ತರತಕ್ಕದ್ದಲ್ಲ.

ಹಾಗೂ, ಈ ಅಧಿನಿಯಮದ ಮೂಲಕ ಧನವಿನಿಯೋಗ ಅಧಿನಿಯಮಗಳ ನಿರಸನವು, ಯಾವುದೇ ಪ್ರಾಧಿಕಾರದ ಮೂಲಕ ಅವುಗಳಿಗೆ ಸಂಬಂಧಪಟ್ಟಂತೆ, ಲೆಕ್ಕ ಪರಿಶೋಧನೆ, ಪರಿಶೀಲನೆ, ಲೆಕ್ಕ ಇಡುವುದು, ತನಿಖೆ, ವಿಚಾರಣೆ ಅಥವಾ ಕೈಗೊಂಡ ಅಥವಾ ಕೈಗೊಳ್ಳಬೇಕಾಗಿರುವ ಇತರೆ ಯಾವುದೇ ಕ್ರಮವನ್ನು ಬಾಧಿಸತಕ್ಕದ್ದಲ್ಲ ಮತ್ತು ಸದರಿ ಅಧಿನಿಯಮಗಳನ್ನು ಈ ಅಧಿನಿಯಮದ ಮೂಲಕ ನಿರಸಿತಗೊಳಿಸಿರದಿದ್ದರೆ ಹೇಗೋ ಹಾಗೆ, ಅಂಥ ಲೆಕ್ಕಪರಿಶೋಧನೆ, ಲೆಕ್ಕ ಇಡುವುದು, ತನಿಖೆ, ವಿಚಾರಣೆ ಅಥವಾ ಕ್ರಮವನ್ನು ಕೈಗೊಳ್ಳಬಹುದು ಮತ್ತು ಅಥವಾ ಮುಂದುವರಿಸಬಹುದು.

ಹಾಗೂ ಯಾವುದೇ ಪ್ರಾದೇಶಿಕ ಕಾನೂನಿನ ನಿರಸನವು, ಆ ಪ್ರಾದೇಶಿಕ ಕಾನೂನುಗಳಿಂದ ಪ್ರದತ್ತವಾದ ಹಕ್ಕುಗಳನ್ನು ಯಾವುದೇ ನ್ಯಾಯಾಲಯದ ಅಥವಾ ಇತರ ಪ್ರಾಧಿಕಾರದ ಮುಂದೆ ಪ್ರಶ್ನಿಸುವುದಕ್ಕಾಗಿ ಅಥವಾ ಜಾರಿಗೊಳಿಸುವುದಕ್ಕಾಗಿ ಈ ಅಧಿನಿಯಮಗಳಡಿಯಲ್ಲಿ ಪ್ರಾರಂಭಿಸಲಾದ ಅಥವಾ ಪ್ರಾರಂಭ ಮಾಡಬೇಕಾದ ಯಾವುದೇ ವ್ಯವಹರಣೆಗಳನ್ನು ಬಾಧಿಸತಕ್ಕದ್ದಲ್ಲ ಮತ್ತು ಆ ವ್ಯವಹರಣೆಗಳನ್ನು ಈ ಕಾನೂನಿನಿಂದ ಸದರಿ ಕಾನೂನುಗಳು ನಿರಸನಗೊಂಡಿರದಿದ್ದರೆ ಹೇಗೋ ಹಾಗೇ ಸದರಿ ಅಧಿನಿಯಮಗಳ ಅನ್ವಯ ಮುಂದುವರಿಸತಕ್ಕದ್ದು, ಮತ್ತು ವಿಲೆ ಮಾಡತಕ್ಕದ್ದು.

(2) ಸಂದೇಹಗಳ ನಿವಾರಣೆಗಾಗಿ, ಈ ಅಧಿನಿಯಮವು ಯಾವುದೇ ಪ್ರಾದೇಶಿಕ ಕಾನೂನನ್ನು ನಿರಸನಗೊಳಿಸಿದ್ದು ಅದರ ಮೂಲಕವಾಗಿ, ಈ ಮುಂದಿನವುಗಳನ್ನು ಮಾಡಲಾಗಿದ್ದಲ್ಲಿ ಈ ಮುಂದಿನಂತೆ ಘೋಷಿಸಲಾಗಿದೆ. ಎಂದರೆ :-

(i) ಯಾವುದೇ ಇತರ ಕಾನೂನಿನ ಪಾಠವನ್ನು, ಯಾವುದೇ ವಿಷಯವನ್ನು ಸ್ಪಷ್ಟವಾಗಿ ಬಿಟ್ಟುಬಿಡುವ, ಸೇರಿಸುವ ಅಥವಾ ಪ್ರತಿಯೋಜಿಸುವ ಮೂಲಕ ತಿದ್ದುಪಡಿ ಮಾಡಲಾಗಿದ್ದಲ್ಲಿ ನಿರಸನವು ಹಾಗೆ ನಿರಸನಗೊಂಡ ಮತ್ತು ಈ ಅಧಿನಿಯಮದ ಪ್ರಾರಂಭದಲ್ಲಿ ಜಾರಿಯಲ್ಲಿದ್ದ ಅಧಿನಿಯಮದ ಮೂಲಕ ಮಾಡಲಾದ ಅಂಥ ಯಾವುದೇ ತಿದ್ದುಪಡಿಯ ಮುಂದುವರಿಕೆಯನ್ನು ಬಾಧಿಸತಕ್ಕದ್ದಲ್ಲ.

(ii) ಸರ್ಕಾರವು ಅಥವಾ ಇತರ ಯಾವುದೇ ಪ್ರಾಧಿಕಾರವು ಕೈಗೊಂಡ ಕ್ರಮವನ್ನು (ರಚಿಸಿದ ಯಾವುದೇ ನಿಯಮ ಅಥವಾ ಆದೇಶ ಅಥವಾ ಉಪವಿಧಿ ಅಥವಾ ವಿನಿಯಮ, ಅಥವಾ ನಿರ್ಧರಿಸಿದ ಅಥವಾ ಸಂಗ್ರಹಿಸಿದ ಯಾವುದೇ ತೆರಿಗೆ ಅಥವಾ ಉಪಕರ ಅಥವಾ ಫೀಜು ಸೇರಿದಂತೆ) ಮಾನ್ಯ ಮಾಡಲಾಗಿದ್ದಲ್ಲಿ ಅಥವಾ ಉಳಿಸಲಾಗಿದ್ದಲ್ಲಿ ಅಥವಾ ಒಂದು ಪ್ರಾಧಿಕಾರದ ಮುಂದಿನ ವ್ಯವಹರಣೆಗಳನ್ನು ಇನ್ನೊಂದು ಪ್ರಾಧಿಕಾರಕ್ಕೆ ವರ್ಗಾವಣೆ ಮಾಡಲಾಗಿದ್ದಲ್ಲಿ ಅಥವಾ ಯಾವುದೇ ಘೋಷಣೆಯನ್ನು ಮಾಡಲಾಗಿದ್ದಲ್ಲಿ

ಅಥವಾ ಅಥವಾ ವಿಲಿನೀಕರಣ ಮಾಡಲಾಗಿದ್ದಲ್ಲಿ ಅಥವಾ ವಿಸ್ತರಣೆ ಮಾಡಲಾಗಿದ್ದಲ್ಲಿ ಅಥವಾ ಪೂರ್ವ ಸ್ಥಿತಿಗೆ ತರಲಾಗಿದ್ದಲ್ಲಿ ಅಥವಾ ಯಾವುದೇ ನಿರ್ದೇಶನವನ್ನು ಕೊಡಲಾಗಿದ್ದಲ್ಲಿ, ಈ ನಿರಸನವು, ಈ ಅಧಿನಿಯಮದ ಪ್ರಾರಂಭದಲ್ಲಿ ಜಾರಿಯಲ್ಲಿದ್ದ ಅಂಥ ಮಾನ್ಯೀಕರಣದ ಅಥವಾ ಉಳಿಸುವಿಕೆಯ ಅಥವಾ ವರ್ಗಾವಣೆಯ ಅಥವಾ ಘೋಷಣೆಯ ಅಥವಾ ನಿರ್ದೇಶನದ ಅಥವಾ ವಿಲಿನೀಕರಣದ ಅಥವಾ ವಿಸ್ತರಣೆಯ ಪ್ರವರ್ತನೆಯನ್ನು ಬಾಧಿಸತಕ್ಕದ್ದಲ್ಲ.

(iii) ಯಾವುದೇ ಅಧಿನಿಯಮವನ್ನು ತಿದ್ದುಪಡಿ ಮಾಡಿದಲ್ಲಿ ಅಥವಾ ನಿರಸನಗೊಳಿಸಿದ್ದಲ್ಲಿ ಅಥವಾ ಕೆಲವು ಆನುಷಂಗಿಕ ಅಥವಾ ತಾತ್ಕಾಲಿಕ ಅಥವಾ ಉಳಿಸುವಿಕೆ ಉಪ ಬಂಧಗಳೊಡನೆ ಅಥವಾ ಅವುಗಳಿಲ್ಲದೆ ಕರ್ನಾಟಕ ರಾಜ್ಯಕ್ಕೆ ವಿಸ್ತರಿಸಲಾಗಿದ್ದಲ್ಲಿ ಈ ನಿರಸನವು ಈ ಅಧಿನಿಯಮದ ಪ್ರಾರಂಭದ ಸಮಯದಲ್ಲಿ ಜಾರಿಯಲ್ಲಿದ್ದ ಅಂಥ ತಿದ್ದುಪಡಿಯ ನಿರಸನದ ಅಥವಾ ವಿಸ್ತರಣೆಯ ಅಥವಾ ಉಪಬಂಧದ ಪ್ರವರ್ತನೆಯನ್ನು ಬಾಧಿಸತಕ್ಕದ್ದಲ್ಲ.

(3) ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ (1899ರ ಕರ್ನಾಟಕ ಅಧಿನಿಯಮ III) 6, 8 ಮತ್ತು 24 ನೇ ಪ್ರಕರಣಗಳ ಉಪಬಂಧಗಳು, ಈ ಅಧಿನಿಯಮದ ಮೂಲಕ ಮಾಡಿದ ಕಾನೂನಿನ ನಿರಸನದ ಮತ್ತು ತಿದ್ದುಪಡಿಯ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು.

**ಅನುಸೂಚಿ**

**(3ನೇ ಪ್ರಕರಣ ನೋಡಿ)**

**ನಿರಸನಗೊಳಿಸಲಾದ ಪ್ರಾದೇಶಿಕ ಕಾನೂನುಗಳು**

**ಬೆಳಗಾಂ ಪ್ರದೇಶದ ಪ್ರಾದೇಶಿಕ ಕಾನೂನುಗಳು**

| ಕ್ರ.ಸಂ. | ವರ್ಷ | ಅಧಿನಿಯಮ ಸಂಖ್ಯೆ | ಸಂಕ್ಷಿಪ್ತ ಹೆಸರು |
|---|---|---|---|
| 1. | 1827 | II | ಕಾಸ್ಟ್-ಕ್ವೆಶ್ಚನ್ಸ್, ಪ್ಲೀಡರ್ಸ್ (ರೆಗ್ಯುಲೇಶನ್ II ಆಫ್ 1827) |
| 2. | 1827 | V | ಅಕ್ನಾಲೆಡ್ಜ್‌ಮೆಂಟ್ ಆಫ್ ಡೆಟ್ಸ್; ಇಂಟರೆಸ್ಟ್; ಮಾರ್ಟ್‌ಗೇಜಸ್ (ರೆಗ್ಯುಲೇಶನ್ V ಆಫ್ 1827) |
| 3. | 1827 | VIII | ಅಡ್ಮಿನಿಸ್ಟ್ರೇಷನ್ ಆಫ್ ಎಸ್ಟೇಟ್ಸ್ (ರೆಗ್ಯುಲೇಶನ್ VIII ಆಫ್ 1827) |
| 4. | 1827 | XIII | ಕ್ರಿಮಿನಲ್ ಕೋರ್ಟ್ಸ್ (ಸಬ್‌ಸ್ಟಿಟ್ಯೂಷನ್ ಆಫ್ ಲೆಟರ್ ಫಾರ್ ಸಮನ್ಸ್) (ರೆಗ್ಯುಲೇಶನ್ XIII ಆಫ್ 1827) |
| 5. | 1863 | VII | ದಿ ಎಕ್ಸೆಂಪ್ಷನ್ಸ್ ಫ್ರಂ ಲ್ಯಾಂಡ್ ರೆವಿನ್ಯೂ (ನಂ. 2) ಆಕ್ಟ್, 1863 (ಆಕ್ಟ್ VII ಆಫ್ 1863) |
| 6. | 1865 | VII | ದಿ ರಿಲಿಜಿಯಸ್ ಎಂಡೋಮೆಂಟ್ಸ್ (ಎಕ್ಸ್‌ಟೆನ್‌ಷನ್ ಟು ಕೆನರಾ) ಆಕ್ಟ್, 1865 (ಆಕ್ಟ್ VII ಆಫ್ 1865) |
| 7. | 1878 | V | ದಿ ಬಾಂಬೆ ಅಬಕಾರಿ ಆಕ್ಟ್, 1878 (ಆಕ್ಟ್ V ಆಫ್ 1878) |
| 8. | 1897 | III | ದಿ ಫಿಮೇಲ್ ಇನ್‌ಫ್ಯಾಂಟಿಸೈಡ್ ಪ್ರಿವೆನ್‌ಷನ್ (ಅಮೆಂಡ್‌ಮೆಂಟ್) ಆಕ್ಟ್, 1897 (ಆಕ್ಟ್ III ಆಫ್ 1897) |

| ಕ್ರಸಂ. | ವರ್ಷ | ಅಧಿನಿಯಮ ಸಂಖ್ಯೆ | ಸಂಕ್ಷಿಪ್ತ ಹೆಸರು |
|---|---|---|---|
| | | | 1897 (ಆಕ್ಟ್ III ಆಫ್ 1897) |
| 9. | 1926 | XI | ದಿ ಇನ್‌ವ್ಯಾಲಿಡೇಷನ್ ಆಫ್ ಹಿಂದೂ ಸೆರೆಮೋನಿಯಲ್ ಎಮಾಲ್ಯುಮೆಂಟ್ಸ್ ಆಕ್ಟ್, 1926 (ಆಕ್ಟ್ XI ಆಫ್ 1926) |
| 10. | 1930 | XXV | ದಿ ಬಾಂಬೆ ಲೋಕಲ್ ಫಂಡ್ ಆಡಿಟ್ ಆಕ್ಟ್, 1930 (ಆಕ್ಟ್ XXV ಆಫ್ 1930) |
| 11. | 1935 | XXV | ದಿ ಬಾಂಬೆ ಪಬ್ಲಿಕ್ ಟ್ರಸ್ಟ್ ರಿಜಿಸ್ಟ್ರೇಷನ್ ಆಕ್ಟ್, 1935 (ಆಕ್ಟ್ XXV ಆಫ್ 1935) |
| 12. | 1935 | XVIII | ದಿ ಮುಸಲ್ಮಾನ್ ವಕ್ಫ್ (ಬಾಂಬೆ ಅಮೆಂಡ್‌ಮೆಂಟ್)ಆಕ್ಟ್, 1935 (ಆಕ್ಟ್ XVIII ಆಫ್ 1935) |
| 13. | 1936 | XXIII | ದಿ ಪಾರ್ಸಿ ಪಬ್ಲಿಕ್ ಟ್ರಸ್ಟ್ ರಿಜಿಸ್ಟ್ರೇಷನ್ ಆಕ್ಟ್, 1936 (ಆಕ್ಟ್ XXIII ಆಫ್ 1936) |
| 14. | 1942 | II | ದಿ ಲೋಕಲ್ ಅಥಾರಿಟೀಸ್ ಲೋನ್ಸ್ (ಬಾಂಬೆ ಅಮೆಂಡ್ ಮೆಂಟ್) ಆಕ್ಟ್, 1942 |
| 15. | 1942 | XXX | ದಿ ಬಾಂಬೆ ಕಾಟನ್ ಕಂಟ್ರೋಲ್ ಆಕ್ಟ್, 1942 (ಆಕ್ಟ್ XXX ಆಫ್ 1942) |
| 16. | 1944 | VIII | ದಿ ಬಾಂಬೆ ಗ್ರೋತ್ ಆಫ್ ಫುಡ್‌ಕ್ರಾಪ್ಸ್ ಆಕ್ಟ್, 1944 (ಆಕ್ಟ್ VIII ಆಫ್ 1944) |
| 17. | 1944 | X | ದಿ ಮುಸಲ್ಮಾನ್ ವಕ್ಫ್, ಬಾಂಬೆ ಟ್ರಸ್ಟ್ಸ್ ರೆಜಿಸ್ಟ್ರೇಷನ್ ಅಂಡ್ ಪಾರ್ಸಿ ಪಬ್ಲಿಕ್ ಟ್ರಸ್ಟ್ಸ್ ರಿಜಿಸ್ಟ್ರೇಷನ್ (ಅಮೆಂಡ್‌ಮೆಂಟ್) ಆಕ್ಟ್, 1944 (ಆಕ್ಟ್ X ಆಫ್ 1944) |
| 18. | 1945 | XV | ದಿ ಮುಸಲ್ಮಾನ್ ವಕ್ಫ್ (ಬಾಂಬೆ ಅಮೆಂಡ್‌ಮೆಂಟ್) ಆಕ್ಟ್, 1945 (ಆಕ್ಟ್ XV ಆಫ್ 1945) |
| 19. | 1947 | XIV | ದಿ ಇಂಡಿಯನ್ ರಿಜಿಸ್ಟ್ರೇಷನ್ (ಬಾಂಬೆ ಅಮೆಂಡ್‌ಮೆಂಟ್) ಆಕ್ಟ್ 1947 (ಆಕ್ಟ್ XIV ಆಫ್ 1947) |
| 20. | 1947 | XIX | ದಿ ಬಾಂಬೆ ಹಿಂದೂ ವುಮೆನ್ಸ್ ರೈಟ್ಸ್ ಟು ಪ್ರಾಪರ್ಟಿ (ಎಕ್ಸ್‌ಟೆನ್‌ಷನ್ ಟು ಅಗ್ರಿಕಲ್ಚರಲ್ ಲ್ಯಾಂಡ್) ಆಕ್ಟ್, 1947 (ಆಕ್ಟ್ XIX ಆಫ್ 1947) |
| 21. | 1947 | LXIV | ದಿ ಬಾಂಬೆ ಫಾರ್‌ವರ್ಡ್ ಕಾಂಟ್ರಾಕ್ಟ್ಸ್ ಕಂಟ್ರೋಲ್ ಆಕ್ಟ್, 1947 (ಆಕ್ಟ್ LXIV ಆಫ್ 1947) |
| 22. | 1948 | XXII | ದಿ ಬಾಂಬೆ ರೆಫ್ಯೂಜೀಸ್ ಆಕ್ಟ್, 1948 (ಆಕ್ಟ್ XXII ಆಫ್ 1948) |
| 23. | 1948 | XLV | ದಿ ಲೀಗಲ್ ಪ್ರಾಕ್ಟೀಷನರ್ಸ್ (ಬಾಂಬೆ ಅಮೆಂಡ್‌ಮೆಂಟ್) ಆಕ್ಟ್, 1948 |

| ಕ್ರಸಂ. | ವರ್ಷ | ಅಧಿನಿಯಮ ಸಂಖ್ಯೆ | ಸಂಕ್ಷಿಪ್ತ ಹೆಸರು |
|---|---|---|---|
| | | | (ಆಕ್ಟ್ XLV ಆಫ್ 1948) |
| 24. | 1948 | LIV | ದಿ ಬಾಂಬೆ ಲಾಟರೀಸ್ ಅಂಡ್ ಪ್ರೈಜ್ ಕಾಂಪಿಟೇಷನ್ಸ್ ಕಂಟ್ರೋಲ್ ಆಂಡ್ ಟ್ಯಾಕ್ಸ್ ಆಕ್ಟ್, 1948 (ಆಕ್ಟ್ LIV ಆಫ್ 1948) |
| 25. | 1948 | LX | ದಿ ಕೋಡ್ ಆಫ್ ಸಿವಿಲ್ ಪ್ರೊಸೀಜರ್ (ಬಾಂಬೆ ಅಮೆಂಡ್ ಮೆಂಟ್) ಆಕ್ಟ್, 1948 (ಆಕ್ಟ್ LX ಆಫ್ 1948) |
| 26. | 1949 | XXVII | ದಿ ಬಾಂಬೆ ರಿಪ್ಯಾಟ್ರಿಯೇಟೆಡ್ ಪ್ರಿಸನರ್ಸ್ ಆಕ್ಟ್, 1949 (ಆಕ್ಟ್ XXVII ಆಫ್ 1949) |
| 27. | 1949 | XXXIII | ದಿ ಬಾಂಬೆ ಭಾಗ್ದಾರಿ ಅಂಡ್ ನರ್ವದಾರಿ ಟೆನ್ಯೂರ್ಸ್ ಅಬಾಲಿಷನ್ ಆಕ್ಟ್, 1949 (ಆಕ್ಟ್ XXXIII ಆಫ್ 1949) |
| 28. | 1950 | LIV | ದಿ ಬಾಂಬೆ ನ್ಯಾಷನ್ ಪಾರ್ಕ್ಸ್ ಆಕ್ಟ್, 1950 (ಆಕ್ಟ್ LIV ಆಫ್ 1950) |
| 29. | 1950 | LX | ದಿ ಬಾಂಬೆ ಪರಗಣ ಅಂಡ್ ಕುಲಕರ್ಣಿ ವತನ್ಸ್ (ಅಬಾಲಿಷನ್) ಆಕ್ಟ್, 1950 (ಆಕ್ಟ್ LX ಆಫ್ 1950) |
| 30. | 1951 | VI | ದಿ ಪ್ರೆಸ್ ಅಂಡ್ ರಿಜಿಸ್ಟ್ರೇಷನ್ ಆಫ್ ಬುಕ್ಸ್ (ಬಾಂಬೆ ಅಮೆಂಡ್‌ಮೆಂಟ್) ಆಕ್ಟ್, 1951 (ಆಕ್ಟ್ VI ಆಫ್ 1951) |
| 31. | 1953 | XXXVIII | ದಿ ಬಾಂಬೆ ಲ್ಯಾಂಡ್ ಟೆನ್ಯೂರ್ಸ್ ಅಬಾಲಿಷನ್ (ಅಮೆಂಡ್‌ಮೆಂಟ್) ಆಕ್ಟ್, 1953 (ಆಕ್ಟ್ XXXVIII ಆಫ್ 1953) |
| 32. | 1953 | XLII | ದಿ ಬಾಂಬೆ ಪರ್ಸನಲ್ ಇನಾಮ್ಸ್ ಅಬಾಲಿಷನ್ ಆಕ್ಟ್, 1952 (ಆಕ್ಟ್ XLII ಆಫ್ 1953) |
| 33. | 1953 | LXX | ದಿ ಬಾಂಬೆ ಸರ್ವೀಸ್ ಇನಾಮ್ಸ್ (ಯೂಸ್‌ಫುಲ್ ಟು ಕಮ್ಯುನಿಟಿ) ಅಬಾಲಿಷನ್ ಆಕ್ಟ್, 1953 (ಆಕ್ಟ್ LXX ಆಫ್ 1953) |
| 34. | 1954 | V | ದಿ ಬಾಂಬೆ ರಿಜಿಸ್ಟ್ರೇಷನ್ ಆಫ್ ಮ್ಯಾರೇಜಸ್ ಆಕ್ಟ್, 1953 (ಆಕ್ಟ್ V ಆಫ್ 1954) |
| 35. | 1953 | XXXIX | ದಿ ಬಾಂಬೆ ಮರ್ಜ್‌ಡ್ ಟೆರಿಟರೀಸ್ ಅಂಡ್ ಏರಿಯಾಸ್ (ಜಾಗೀರ್ಸ್ ಅಬಾಲಿಷನ್) ಆಕ್ಟ್, 1953 (ಆಕ್ಟ್ XXXIX ಆಫ್ 1954) |
| 36. | 1955 | XXII | ದಿ ಬಾಂಬೆ ಮರ್ಜ್‌ಡ್ ಟೆರಿಟರಿಸ್ ಮಿಸಲೇನಿಯಸ್ ಏಲಿನೇಶನ್ಸ್ ಅಬಾಲಿಷನ್ ಆಕ್ಟ್, 1955 (ಆಕ್ಟ್ XXII ಆಫ್ 1955) |
| 37. | 1955 | L | ದಿ ಬಾಂಬೆ ಪರಗಣಾ ಅಂಡ್ ಕುಲಕರ್ಣಿ ವತನ್ಸ್ (ಅಬಾಲಿಷನ್) (ಅಮೆಂಡ್‌ಮೆಂಟ್) ಆಕ್ಟ್, 1955 (ಆಕ್ಟ್ L ಆಫ್ 1955) |
| 38. | 1955 | LI | ದಿ ಬಾಂಬೆ ಲ್ಯಾಂಡ್ ಟೆನ್ಯೂರ್ಸ್ ಅಬಾಲಿಷನ್ (ಅಮೆಂಡ್‌ಮೆಂಟ್) ಆಕ್ಟ್, |

| ಕ್ರ.ಸಂ. | ವರ್ಷ | ಅಧಿನಿಯಮ ಸಂಖ್ಯೆ | ಸಂಕ್ಷಿಪ್ತ ಹೆಸರು |
|---|---|---|---|
| | | | 1955 (ಆಕ್ಟ್ LI ಆಫ್ 1955) |
| 39. | 1956 | III | ದಿ ಬಾಂಬೆ ಏರಿಯಲ್ ರೋಪ್‌ವೇಸ್ ಆಕ್ಟ್, 1955 (ಆಕ್ಟ್ III ಆಫ್ 1956) |
| 40. | 1956 | XXXVI | ದಿ ಇಂಡಸ್ಟ್ರಿಯಲ್ ಎಂಪ್ಲಾಯ್‌ಮೆಂಟ್ (ಸ್ಟಾಂಡಿಂಗ್ ಆರ್ಡರ್ಸ್) (ಬಾಂಬೆ ಅಮೆಂಡ್‌ಮೆಂಟ್) ಆಕ್ಟ್, 1956 (ಆಕ್ಟ್ XXXVI ಆಫ್ 1956) |
| 41. | 1956 | XL | ದಿ ಬಾಂಬೆ ಲ್ಯಾಂಡ್ ಟೆನ್ಯೂರ್ಸ್ ಅಬಾಲಿಷನ್ (ಅಮೆಂಡ್‌ಮೆಂಟ್) ಆಕ್ಟ್, 1956 (ಆಕ್ಟ್ XL ಆಫ್ 1956) |

## ಕೊಡಗು ಪ್ರದೇಶದ ಪ್ರಾದೇಶಿಕ ಕಾನೂನುಗಳು

| ಕ್ರ.ಸಂ. | ವರ್ಷ | ಅಧಿನಿಯಮ ಸಂಖ್ಯೆ | ಸಂಕ್ಷಿಪ್ತ ಹೆಸರು |
|---|---|---|---|
| 1 | 1943 | **I** | ದಿ ಕೂರ್ಗ್ ಪಬ್ಲಿಕ್ ಹೆಲ್ತ್ ಆಕ್ಟ್, 1943 (ಕೂರ್ಗ್ ಆಕ್ಟ್ I ಆಫ್ 1943) |

## ಗುಲ್ಬರ್ಗ ಪ್ರದೇಶದ ಪ್ರಾದೇಶಿಕ ಕಾನೂನುಗಳು

| ಕ್ರ.ಸಂ. | ವರ್ಷ | ಅಧಿನಿಯಮ ಸಂಖ್ಯೆ | ಸಂಕ್ಷಿಪ್ತ ಹೆಸರು |
|---|---|---|---|
| 1 | 1337 | VI | ದಿ ಹೈದರಾಬಾದ್ ಕಾಟನ್ ಕಲ್ಟಿವೇಷನ್ ಅಂಡ್ ಟ್ರಾನ್ಸ್‌ಪೋರ್ಟ್ ಆಕ್ಟ್ (VI ಆಫ್ 1337) |
| 2 | 1350 | XII | ದಿ ಹೈದರಾಬಾದ್ ಇನ್‌ಫೆಕ್ಷನ್ಸ್ ಡಿಸೀಸಸ್ ಆಕ್ಟ್ 1950 (XII ಆಫ್ 1950) |
| 3 | 1952 | XII | ದಿ ಹೈದರಾಬಾದ್ ಜಾಗೀರ್‌ದಾರ್ಸ್ ಡೆಟ್ಟ್ ಸೆಟಲ್‌ಮೆಂಟ್ ಆಕ್ಟ್ (1952 XII) |
| 4 | 1955 | VIII | ದಿ ಹೈದರಾಬಾದ್ ಅಬಾಲಿಷನ್ ಆಫ್ ಇನಾಮ್ಸ್ ಆಕ್ಟ್ (1955 VIII) |
| 5 | 1956 | X | ದಿ ಅಬಾಲಿಷನ್ ಆಫ್ ಇನಾಮ್ಸ್/ಆಕ್ಟ್ (1956 X) |

## ಮಂಗಳೂರು ಮತ್ತು ಕೊಳ್ಳೇಗಾಲ ಪ್ರದೇಶಗಳ ಪ್ರಾದೇಶಿಕ ಕಾನೂನುಗಳು

| ಕ್ರ.ಸಂ. | ವರ್ಷ | ಅಧಿನಿಯಮ ಸಂಖ್ಯೆ | ಸಂಕ್ಷಿಪ್ತ ಹೆಸರು |
|---|---|---|---|
| 1. | 1817 | VII | ದಿ ಮದ್ರಾಸ್ ಎಂಡೋಮೆಂಟ್ಸ್ ಅಂಡ್ ಎಸೆಟ್ಸ್ ರೆಗ್ಯುಲೇಷನ್, 1817 (VII ಆಫ್ 1817) |

| ಕ್ರ.ಸಂ. | ವರ್ಷ | ಅಧಿನಿಯಮ ಸಂಖ್ಯೆ | ಸಂಕ್ಷಿಪ್ತ ಹೆಸರು |
|---|---|---|---|
| 2. | 1862 | IV | ದಿ ಮದ್ರಾಸ್ ಇನ್ಫ್ರಾಂಚಿಸ್ಟ್ ಇನಾಮ್ಸ್ ಆಕ್ಟ್, 1862 (IV ಆಫ್ 1862) |
| 3. | 1865 | V | ದಿ ಮದ್ರಾಸ್ ಡಿಸ್ಟ್ರಿಕ್ಟ್ ಪೋಲೀಸ್ (ಅಮೆಂಡ್‌ಮೆಂಟ್) ಆಕ್ಟ್, 1865 (V ಆಫ್ 1865) |
| 4. | 1866 | IV | ದಿ ಮದ್ರಾಸ್ ಎನ್ಫ್ರಾಂಚಿಸ್ಡ್ ಇನಾಮ್ಸ್ ಆಕ್ಟ್, 1866 (IV ಆಫ್ 1866) |
| 5. | 1869 | VIII | ದಿ ಮದ್ರಾಸ್ ಇನಾಮ್ಸ್ ಆಕ್ಟ್ 1869 (VIII ಆಫ್ 1886) |
| 6. | 1886 | IV | ದಿ ರೈಲ್ವೆ ಪ್ರೊಟೆಕ್ಷನ್ ಆಕ್ಟ್, 1886 (IV ಆಫ್ 1886) |
| 7. | 1899 | IV | ದಿ ಮದ್ರಾಸ್ ಕೋರ್ಟ್ ಆರ್ಫ ವಾರ್ಡ್ಸ್ (ಅಮೆಂಡ್‌ಮೆಂಟ್) ಆಕ್ಟ್, 1899 (IV ಆಫ್ 1899) |
| 8. | 1904 | II | ದಿ ಮದ್ರಾಸ್ ಇಂಪಾರ್ಟಿಬಲ್ ಎಸ್ಟೇಟ್ ಆಕ್ಟ್, 1904 (II ಆಫ್ 1904) |
| 9. | 1908 | I | ದಿ ಮದ್ರಾಸ್ ಎಸ್ಟೇಟ್ ಲ್ಯಾಂಡ್ ಆಕ್ಟ್, 1908 (I ಆಫ್ 1908) |
| 10. | 1920 | XIII | ದಿ ಮೂಲಗೇಣಿ ರೆಂಟ್ ಎನಾನ್ಸ್‌ಮೆಂಟ್ ಆಕ್ಟ್, 1920 (XIII ಆಫ್ 1920) |
| 11. | 1934 | VIII | ದಿ ಮದ್ರಾಸ್ ಎಸ್ಟೇಟ್ಸ್ ಲ್ಯಾಂಡ್ (ಅಮೆಂಡ್‌ಮೆಂಟ್) ಆಕ್ಟ್, 1934 (VIII ಆಫ್ 1934) |
| 12. | 1936 | I | ದಿ ಮದ್ರಾಸ್ ಎಸ್ಟೇಟ್ಸ್ ಲ್ಯಾಂಡ್ (ಅಮೆಂಡ್‌ಮೆಂಟ್ಸ್) ಆಕ್ಟ್, 1935 (I ಆಫ್ 1936) |
| 13. | 1936 | XIII | ದಿ ಮದ್ರಾಸ್ ಎಸ್ಟೇಟ್ಸ್ ಲ್ಯಾಂಡ್ (ಸೆಕೆಂಡ್ ಅಮೆಂಡ್‌ಮೆಂಟ್) ಆಕ್ಟ್ 1936 (XIII ಆಫ್ 1936) |
| 14. | 1936 | XVIII | ದಿ ಮದ್ರಾಸ್ ಎಸ್ಟೇಟ್ ಲ್ಯಾಂಡ್ (ಥರ್ಡ್ ಅಮೆಂಡ್‌ಮೆಂಟ್) ಆಕ್ಟ್, 1936 (XVII ಆಫ್ 1936) |
| 15. | 1937 | VIII | ಯೂಷರೀಸ್ ಲೋನ್ಸ್ (ಮದ್ರಾಸ್ ಅಮೆಂಡ್‌ಮೆಂಟ್) ಆಕ್ಟ್, 1936 (VIII ಆಫ್ 1937) |
| 16. | 1939 | III | ದಿ.ಮದ್ರಾಸ್ ಪಬ್ಲಿಕ್ ಹೆಲ್ತ್ ಆಕ್ಟ್, 1939 (III ಆಫ್ 1939) |
| 17. | 1943 | III | ದಿ ಲೀಗಲ್ ಪ್ರಾಕ್ಟೀಷನರ್ಸ್ (ಮದ್ರಾಸ್ ಅಮೆಂಡ್‌ಮೆಂಟ್) ಆಕ್ಟ್, 1943 (1943 ಆಫ್ III) |

| ಕ್ರ.ಸಂ. | ವರ್ಷ | ಅಧಿನಿಯಮ ಸಂಖ್ಯೆ | ಸಂಕ್ಷಿಪ್ತ ಹೆಸರು |
|---|---|---|---|
| 18. | 1947 | IX | ದಿ ಬಾರ್ ಕೌನ್ಸಿಲ್ ಅಂಡ್ ಲೀಗಲ್ ಪ್ರಾಕ್ಟೀಷನರ್ಸ್ (ಮದ್ರಾಸ್ ಅಮೆಂಡ್‌ಮೆಂಟ್) ಆಕ್ಟ್, 1947 (IX ಆಫ್ 1947) |
| 19. | 1947 | XXX | ದಿ ಮದ್ರಾಸ್ ಎಸ್ಟೇಟ್ ಲ್ಯಾಂಡ್ (ರಿಡಕ್ಷನ್ ಆಫ್ ರೆಂಟ್) ಆಕ್ಟ್, 1947 (XXX ಆಫ್ 1947) |
| 20. | 1947 | XXXII | ದಿ ಮದ್ರಾಸ್ ಮರುಮಕ್ಕಟ್ಟಾಯವರ್ (ಅಮೆಂಡ್‌ಮೆಂಟ್) ಆಕ್ಟ್, 1947 (XXXII ಆಫ್ 1947) |
| 21. | 1947 | XXXIV | ದಿ ಅಫೀಮು ಅಂಡ್ ಡೇಂಜರಸ್ ಡ್ರಗ್ಸ್ (ಮದ್ರಾಸ್ ಅಮೆಂಡ್‌ಮೆಂಟ್) ಆಕ್ಟ್, 1947 (XXXIV ಆಫ್ 1947) |
| 22. | 1948 | XXVI | ದಿ ಮದ್ರಾಸ್ ಎಸ್ಟೇಟ್ (ಅಬಾಲಿಷನ್ ಅಂಡ್ ಕನ್‌ವರ್‌ಷನ್ ಇನ್‌ಟು ರೈತ್ವಾರಿ) ಆಕ್ಟ್, 1948 (XXVI ಆಫ್ 1948) |
| 23. | 1949 | XX | ದಿ ಮದ್ರಾಸ್ ಶುಗರ್ ಪ್ಯಾಕ್ಟರೀಸ್ ಕಂಟ್ರೋಲ್ ಆಕ್ಟ್, 1949 (XX ಆಫ್ 1949) |
| 24. | 1949 | XXVIII | ದಿ ಮದ್ರಾಸ್ ಜೂಟ್ ಗೂಡ್ಸ್ ಕಂಟ್ರೋಲ್ ಆಕ್ಟ್, 1949 (XXVIII ಆಫ್ 1949) |
| 25. | 1950 | V | ದಿ ಮದ್ರಾಸ್ ಜೂಟ್ (ಕಂಟ್ರೋಲ್ ಆಫ್ ಪ್ರೈಸಸ್ ಅಂಡ್ ಸೇಲ್ಸ್) ಆಕ್ಟ್, 1950 (V ಆಫ್ 1950) |
| 26. | 1950 | XVII | ದಿ ಲೀಗಲ್ ಪ್ರಾಕ್ಟೀಷನರ್ಸ್ (ಮದ್ರಾಸ್ ಅಮೆಂಡ್‌ಮೆಂಡ್) ಆಕ್ಟ್, 1950 (XVII ಆಫ್ 1950) |
| 27. | 1950 | XXXIV | ದಿ ಕೋಡ್ ಆಫ್ ಸಿವಿಲ್ ಪ್ರೊಸೀಜರ್ (ಮದ್ರಾಸ್ ಅಮೆಂಡ್‌ಮೆಂಟ್) ಆಕ್ಟ್, 1950 (XXXIV ಆಫ್ 1950) |
| 28. | 1950 | XXXIV | ದಿ ಮದ್ರಾಸ್ ಹೆರಿಡಿಟರಿ ವಿಲೇಜ್–ಆಫೀಸ್ (ಅಮೆಂಡ್‌ಮೆಂಟ್) ಆಕ್ಟ್, 1950 (XXXIV ಆಫ್ 1950) |
| 29. | 1951 | XVII | ದಿ ಮದ್ರಾಸ್ ಎಸ್ಟೇಟ್ಸ್ (ಅಬಾಲಿಷನ್ ಅಂಡ್ ಕನ್ವರ್‌ಷನ್ ಇನ್‌ಟು ರೈತ್ವಾರಿ) (ಅಮೆಂಡ್‌ಮೆಂಟ್) ಆಕ್ಟ್, 1951 (XVII ಆಫ್ 1951) |
| 30. | 1951 | XXXIX | ದಿ ಮದ್ರಾಸ್ ಎಸ್ಟೇಟ್ಸ್ ಲ್ಯಾಂಡ್ (ರಿಡಕ್ಷನ್ ಆಫ್ ರೆಂಟ್) ಸೆಕೆಂಡ್ ಅಮೆಂಡ್‌ಮೆಂಟ್) ಆಕ್ಟ್, 1951 (XXXIX ಆಫ್ 1951) |
| 31. | 1953 | IX | ದಿ ಮದ್ರಾಸ್ ಎಸ್ಟೇಟ್ಸ್ (ಅಬಾಲಿಷನ್ ಅಂಡ್ ಕನ್ವರಷನ್ ಇನ್‌ಟು ರೈತ್ವಾರಿ) (ಅಮೆಂಡ್‌ಮೆಂಟ್) ಆಕ್ಟ್, 1953 (IX ಆಫ್ 1953) |

| ಕ್ರ.ಸಂ. | ವರ್ಷ | ಅಧಿನಿಯಮ ಸಂಖ್ಯೆ | ಸಂಕ್ಷಿಪ್ತ ಹೆಸರು |
|---|---|---|---|
| 32. | 1954 | XXIII | ದಿ ಮದ್ರಾಸ್ ಇಸ್ಟಾಲೇಷನ್ ಆಫ್ ಆಯಿಲ್ ಇಂಜಿನ್ಸ್ (ಟೆಂಪೊರರಿ ಪರ್ಮಿಷನ್) ಆಕ್ಟ್, 1954 (XXIII ಆಫ್ 1954) |
| 33. | 1954 | XXVII | ದಿ ಮದ್ರಾಸ್ ಹಿಂದು ರಿಲೀಜಿಯಸ್ ಅಂಡ್ ಚಾರಿಟೆಬಲ್ ಎಂಡೋಮೆಂಟ್ಸ್ (ಅಮೆಂಡ್‌ಮೆಂಡ್) ಆಕ್ಟ್, 1954 (XXVII ಆಫ್ 1954) |
| 34. | 1954 | XXXV | ದಿ ಇಂಡಿಯನ್ ಬಾರ್ ಕೌನ್ಸಿಲ್ (ಮದ್ರಾಸ್ ಅಮೆಂಡ್‌ಮೆಂಟ್) ಆಕ್ಟ್, 1954 (XXXV ಆಫ್ 1954) |
| 35. | 1954 | XXXVIII | ದಿ ಮಾಪಿಲ್ಲಮರುಮಕ್ಕಟ್ಟಾಯಬಲ್ (ಅಮೆಂಡ್‌ಮೆಂಟ್) ಆಕ್ಟ್, 1954 (XXXVIII ಆಫ್ 1954) |
| 36. | 1956 | IX | ದಿ ಮದ್ರಾಸ್ ಹಿಂದೂ ರಿಲಿಜಿಯಸ್ ಅಂಡ್ ಚಾರಿಟಬಲ್ ಎಂಡೋಮೆಂಟ್ಸ್ (ಅಮೆಂಡ್‌ಮೆಂಟ್) ಆಕ್ಟ್, 1956 (IX ಆಫ್ 1956) |

**ಮೈಸೂರು ಪ್ರದೇಶದ ಪ್ರಾದೇಶಿಕ ಕಾನೂನುಗಳು**

| ಕ್ರ.ಸಂ. | ವರ್ಷ | ಅಧಿನಿಯಮ ಸಂಖ್ಯೆ | ಸಂಕ್ಷಿಪ್ತ ಹೆಸರು |
|---|---|---|---|
| 1 | 1885 | II | ದಿ ಎಕ್ಸೈಸ್ (ಸ್ಪಿರಿಟ್ಸ್) ಆಕ್ಟ್, 1885 (ಮೈಸೂರು ಆಕ್ಟ್ II ಆಫ್ 1885) |
| 2 | 1944 | X | ದಿ ಮೈಸೂರು ಪಬ್ಲಿಕ್ ಹೆಲ್ತ್ ಆಕ್ಟ್ 1944 (ಮೈಸೂರು ಆಕ್ಟ್ X ಆಫ್ 1944) |
| 3 | 1944 | XXIX | ದಿ ಮೈಸೂರು ಫ್ಯಾಕ್ಟರೀಸ್ (ಕಂಟ್ರೋಲ್ ಆಫ್ ಡಿಸ್‌ಮೆಂಟಲಿಂಗ್) ಆಕ್ಟ್, 1944 (ಮೈಸೂರು ಆಕ್ಟ್ XXIX ಆಫ್ 1994) |
| 4 | 1948 | XLIV | ದಿ ಮೈಸೂರ್ ಹಿಂದು ಸಗೋತ್ರ ಮ್ಯಾರೇಜ್ ವ್ಯಾಲಿಡೇಷನ್ ಆಕ್ಟ್, 1948 (ಮೈಸೂರು ಆಕ್ಟ್ XLIV ಆಫ್ 1948) |
| 5 | 1951 | XXVII | ದಿ ಮೈಸೂರು ಲಾಟರೀಸ್ ಅಂಡ್ ಪ್ರೈಜ್ ಕಾಂಪಿಟೇಷನ್ ಕಂಟ್ರೋಲ್ ಅಂಡ್ ಟ್ಯಾಕ್ಸ್ ಆಕ್ಟ್ 1951 (ಮೈಸೂರು ಆಕ್ಟ್ XXVII ಆಫ್ 1951) |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಜಿ.ಕೆ.ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ3) (350 ಪ್ರತಿಗಳು)